

ಲಿಂಗರಾಜ ಅರಮನೆ.

ಟಿಪ್ಪೂ ಸುಲ್ತಾನ್ ಕಟ್ಟಿಸಿದ ಈ ಕೋಟೆ ಈಗಲೂ ಸುಭದ್ರವಾಗಿದೆ. ಕೋಟೆಯ ವಿನ್ಯಾಸ ಅಂಕು–ಡೊಂಕಾಗಿ ಷಟ್ ಕೋನಾಕೃತಿಯಲ್ಲಿದೆ. ಕೋಟೆಯ ಆರು ಕೋನಗಳಲ್ಲೂ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಕೋಟೆಯ ಮುಖ್ಯದ್ವಾರ ಪೂರ್ವಾಭಿಮುಖವಾಗಿದೆ. ಅರ್ಧ ವೃತ್ತಾಕಾರದ ಕಮಾನು ಹೊಂದಿರುವ ದ್ವಾರಕ್ಕೆ ಮರದ ಕದಗಳನ್ನು ಅಳವಡಿಸಲಾಗಿದೆ.

ಕಮಾನು ದ್ವಾರ ದಾಟಿದ ಬಳಿಕ ಎರಡು ದ್ವಾರಗಳು ಸಿಗುತ್ತವೆ. ಕೋಟೆ ಆವರಣಕ್ಕೆ ಹೋಗುವ ಮಾರ್ಗದ ನಡುವೆ ಗಣೇಶ ದೇಗುಲವೂ ಇದೆ. ಕೋಟೆ ಪ್ರವೇಶಿಸಿದಂತೆಯೇ ಮೊದಲಿಗೆ ನಮ್ಮ ಗಮನ ಸೆಳೆಯುವುದು ಆನೆ ಗಾತ್ರದಷ್ಟೇ ದೊಡ್ಡದಾದ, ಗಾರೆಯಲ್ಲಿ ನಿರ್ಮಿಸಿರುವ ಎರಡು ಆನೆಗಳ ಆಕೃತಿಗಳು. ಕೋಟೆಯ ಮೇಲೆ ಪ್ರವಾಸಿಗರು ಸಂಚರಿಸುವಾಗ ಪ್ರಕೃತಿಯ ಮಡಿಲಿನಲ್ಲಿ ವಿಹಂಗಮವಾಗಿ ಮಲಗಿರುವ ಮಡಿಕೇರಿ ನಗರದ ದರ್ಶನವಾಗುತ್ತದೆ.

ಕ್ರಿ.ಶ.1790ರಲ್ಲಿ ಈ ಕೋಟೆ ದೊಡ್ಡವೀರ ರಾಜೇಂದ್ರನ ವಶವಾಯಿತು. ನಂತರ ಆಳಿದ ಇಮ್ಮಡಿ ಲಿಂಗರಾಜ ಒಡೆಯರ್ ಕ್ರಿ.ಶ.1812–14ರಲ್ಲಿ ಈ ಕೋಟೆಯ ಮಧ್ಯಭಾಗದಲ್ಲಿ ಭವ್ಯವಾದ ಅರಮನೆಯೊಂದನ್ನು ನಿರ್ಮಿಸಿದನು. ಎರಡು ಮಾಳಿಗೆಯ ಈ ಅರಮನೆಯನ್ನು ಐರೋಪ್ಯ ಶೈಲಿಯಲ್ಲಿ ನಿರ್ಮಿಸಲಾಗಿದೆ.

1834 ರಲ್ಲಿ ಈ ಕೋಟೆಯ ಆಡಳಿತವನ್ನು ಬ್ರಿಟಿಷರೇ ವಹಿಸಿಕೊಂಡರು. ಕೋಟೆಯ ಆವರಣದಲ್ಲಿ 1855ರಲ್ಲಿ ಬ್ರಿಟಿಷರು ಗಾಥಿಕ್ ಶೈಲಿಯಲ್ಲಿ ಚರ್ಚ್‌ವೊಂದನ್ನು ನಿರ್ಮಿಸಿದ್ದಾರೆ. ಬ್ರಿಟಿಷರು ಮಡಿಕೇರಿಯನ್ನು ಮರ್ಕೆರಾ ಎಂದೇ ಸಂಭೋದಿಸಿದರು. ಈ ಚರ್ಚ್ ಇಂದು ಪ್ರಾಚ್ಯವಸ್ತು ಸಂಗ್ರಹಾಲಯವಾಗಿದೆ.

ಮಡಿಕೇರಿಯ ಈ ಐತಿಹಾಸಿಕ ಸ್ಥಳದಲ್ಲಿ ಕೋಟೆ, ಅರಮನೆ, ಚರ್ಚ್ ಸ್ಮಾರಕಗಳು ಇದ್ದಾಗ್ಯೂ ಈ ಪ್ರದೇಶ ಪ್ರವಾಸಿ ಕೇಂದ್ರವಾಗಿ ರೂಪುಗೊಳ್ಳದೇ ಇರುವುದು ಆಶ್ಚರ್ಯಕರ. ಅದಕ್ಕೆ ಕಾರಣವೂ ಇದೆ. ಮಡಿಕೇರಿ ಕೊಡಗಿನ ಜಿಲ್ಲಾಕೇಂದ್ರವಾದಾಗ ಲಿಂಗರಾಜ ಅರಮನೆಯಲ್ಲಿಯೇ ಜಿಲ್ಲಾಧಿಕಾರಿಯ ಕಛೇರಿ ಆರಂಭಗೊಂಡಿತ್ತು. ಈ ಕಛೇರಿಯು ಸೇರಿದಂತೆ ಕೋಟೆಯ ಆವರಣದಲ್ಲಿ ರಾಜ್ಯ ಸರ್ಕಾರದ ಬಹುತೇಕ ಇಲಾಖಾ ಕಛೇರಿಗಳನ್ನು ತೆರೆಯಲಾಯಿತು. ಹಳೆಯ ಕಾಲದ ಅರಮನೆಗಳನ್ನು ಹಾಗೆಯೇ ಬಿಟ್ಟರೆ ಸರಿಯಾದ ನಿರ್ವಹಣೆ ಇಲ್ಲದೆ ಪಾಳು ಬೀಳುವುದು ಸಹಜ. ಅದನ್ನು ತಪ್ಪಿಸಲೆಂದೇ ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಹಳೆಯ ಅರಮನೆಗಳನ್ನು ಜಿಲ್ಲಾಧಿಕಾರಿ ಕಚೇರಿಯಾಗಿಯೋ, ಜಿಲ್ಲಾ ಪೊಲೀಸ್ ವರಿಷ್ಠರ ಕಚೇರಿ–ಯಾಗಿಯೋ ಬಳಕೆ ಮಾಡುತ್ತಿರುವುದು ಒಳ್ಳೆಯದೇ. ಆದರೆ ಮಡಿಕೇರಿಯಲ್ಲಿ ಅರಮನೆ ಯಲ್ಲಿಯೇ ಜಿಲ್ಲಾಧಿಕಾರಿ ಕಚೇರಿ ಇರುವುದರಿಂದ ಹೆಚ್ಚಿನ ಪ್ರವಾಸಿಗರು ಅಲ್ಲಿಗೆ ಹೋಗುವುದಿಲ್ಲ. ಹಾಗೆಯೇ ಈ ಐತಿಹಾಸಿಕ ಅರಮನೆ–ಯನ್ನು ಪ್ರವಾಸೀ ಕೇಂದ್ರವಾಗಿ ಅಭಿವೃದ್ಧಿ ಮಾಡುವ ಕೆಲಸವೂ ಆಗಿಲ್ಲ.

ಈಗ ಜಿಲ್ಲಾಧಿಕಾರಿ ಕಛೇರಿ ಸ್ವಂತ ನೂತನ ಕಟ್ಟಡಕ್ಕೆ ಸ್ಥಳಾಂತರ–ಗೊಳ್ಳುವುದು ಸನ್ನಿಹಿತವಾಗಿದೆ. ಜಿಲ್ಲಾ ಕಛೇರಿ ಸ್ಥಳಾಂತರಗೊಳ್ಳುವಂತೆ ರಾಜ್ಯದ ಇತರ ಇಲಾಖಾ ಕಛೇರಿಗಳು ಸ್ಥಳಾಂತರಗೊಳ್ಳುವುದು ಅಗತ್ಯವಾಗಿದೆ. ರಾಜ್ಯ ಪುರಾತತ್ವ ಇಲಾಖೆಯು ಲಿಂಗರಾಜ ಅರಮನೆಯನ್ನು ಪ್ರಾಚ್ಯವಸ್ತು ಸಂಗ್ರಹಾಲಯವನ್ನಾಗಿ ಮಾಡಬೇಕಾಗಿದೆ. ಹಾಗೆಯೇ ರಾಜ್ಯದ ಪ್ರವಾಸೋದ್ಯಮ ಇಲಾಖೆ ಇಂತಹ ಐತಿಹಾಸಿಕ ಸ್ಥಳವನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿ ಪಡಿಸಿ ಇನ್ನಷ್ಟು ಪ್ರವಾಸಿಗರನ್ನು ಆಕರ್ಷಿಸುವಂತೆ ಮಾಡಲು ಕಾರಂಜಿ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸಬೇಕಿದೆ. ಹೀಗೆ ಮಾಡಿದರೆ ಮಡಿಕೇರಿಗೆ ಬರುವ ಪ್ರವಾಸಿಗರ ಸಂಖ್ಯೆ ಖಂಡಿತವಾಗಿಯೂ ದ್ವಿಗುಣಗೊಳ್ಳಲಿದೆ.